ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಕಾಡಿನ ಬೇಟೆಗಳ ಬೆನ್ನು ಹತ್ತಿ...

ಕಾಡಿನ ಯಾವುದೇ ಭಾಗದಲ್ಲಿ ನಡೆಯುವ ಬೇಟೆಯ ವಿಷಯ ತಕ್ಷಣಕ್ಕೆ ಮಾಂಸ ಅವಲಂಬಿಸಿ ಬದುಕುವ ಎಲ್ಲಾ ಪ್ರಾಣಿ ಪಕ್ಷಿಗಳಿಗೆ ಪಕ್ಕನೆ ತಿಳಿದು ಹೋಗುತ್ತದೆ. ಬಲಿಯಾಗುವ ಪ್ರಾಣಿಯ ಪ್ರತಿ ಅಂಶವನ್ನು ಅಲ್ಲಿರುವ ಇರುವೆಗಳಿಂದ ಹಿಡಿದು ಪ್ರಾಣಿ ಪಕ್ಷಿಗಳೆಲ್ಲವೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಹಂಚಿ ತಿನ್ನುತ್ತವೆ.



ಕಾಡಿನ ನಡುವೆ ಎಲ್ಲೇ ಶಿಕಾರಿ ನಡೆದರೂ ಮಂಜು ನನಗೆ ತಿಳಿಸುತ್ತಾನೆ. ದಿನಾ ಬೆಳಗ್ಗೆ ಮತ್ತು ಸಂಜೆ ಕಾಡಿನಲ್ಲೇ ಸುತ್ತಾಡುವ ಅವನಿಗೆ ಒಂದು ಸಣ್ಣ ವಾಸನೆ ಸಿಕ್ಕರೂ ಸಾಕು. ಅದು ಲಾಟರಿ ಹೊಡೆದಂತೆ. ಆಗಿರುವುದು ತಾಜಾ ಶಿಕಾರಿಯೋ ಅಥವಾ ಎರಡು ದಿನದ ಹಿಂದೆಯೇ ಅದು ಹೊಡೆತಕ್ಕೆ ಸಿಕ್ಕಿ ಬಿದ್ದ ಮಿಕವೋ? ಎಂದು ಆತ ಖಚಿತವಾಗಿ ಅಂದಾಜಿಸಬಲ್ಲ. ಅವನ ಮೂಗು ಅಷ್ಟೊಂದು ಸೂಕ್ಷ್ಮ. ಸಣ್ಣ ಕಡ್ಡಿ ಅಲುಗಿದರೂ, ಒಣ ಎಲೆ ತುಳಿದ ಸದ್ದಾದರೂ ಇವನ ಕಿವಿ ಜಾಗೃತ. ಕಣ್ಣು ದುರ್ಬೀನಿಗಿಂತ ಖಚಿತ. ಅವನ ಕಡೆಯಿಂದ ಸಣ್ಣ ವರ್ತಮಾನ ಸಿಕ್ಕರೆ ಸಾಕು ನಾವು ಯುದ್ಧಕ್ಕೆ ಹೊರಡುವ ಸೈನಿಕರಂತೆ ರೆಡಿಯಾಗಿ ಬಿಡುತ್ತೇವೆ.

ಕಾಡಿನಲ್ಲಿ ತಿರುಗುವ ಜನರ ಕಣ್ಣು, ಕಿವಿ, ಮತ್ತು ಮೂಗು ತುಂಬಾ ಚುರುಕಾಗಿರಬೇಕು. ಏಕೆಂದರೆ ಕಾಡಿನ ಭಾಷೆ ತಿಳಿಯಲು ಇರುವುದು ಇವು ಮೂರೇ ಸಾಧನಗಳು. ಎಷ್ಟೋ ಸಲ ಕಾಡಿನಲ್ಲಿ ಪ್ರಾಣಿ, ಪಕ್ಷಿಗಳು ನಮ್ಮ ಕಣ್ಣ ಮುಂದೆ ಕೂತಿದ್ದರೂ ಕಂಡುಹಿಡಿಯುವುದು ಕಷ್ಟವಾಗಿ ಬಿಡುತ್ತದೆ. ಅಷ್ಟರ ಮಟ್ಟಿಗೆ ಅವು ಕಾಡಿನ ಮಣ್ಣು, ಒಣ ಎಲೆ ಮತ್ತು ಮರದ ತೊಗಟೆಗಳ ಸಹಜ ಬಣ್ಣಗಳ ಬಳಸಿಕೊಂಡು ಅದೃಶ್ಯವಾಗಿರುತ್ತವೆ. ಕಂಡರೂ ಕಾಣದಂತೆ ಮರೆಯಾಗಿರುವ, ಪ್ರಕೃತಿಯ ವರ್ಣಗಳಲ್ಲಿ ಮಿಳಿತವೇ ಆಗಿ ಹೋಗುವ ಇವುಗಳಿಗೆ ನಿಸರ್ಗ ಕರುಣಿಸಿರುವ ಅಮೋಘ ವರದಾನವಿದು. ಈ ಮಾತನ್ನು ಎಷ್ಟು ವಿವರಿಸಿ ಹೇಳಿದರೂ ಸಾಮಾನ್ಯರಿಗೆ ಅರ್ಥ ಮಾಡಿಸುವುದು ಕಷ್ಟ. ಸ್ವತಃ ಅನುಭವ ಆಗದ ಹೊರತು ಇದ್ಯಾವುದು ಮನನವಾಗುವ ವಿಷಯವೇ ಅಲ್ಲ. ಪೊದೆಯ ಹಿಂದೆ ಅವಿತು ಕುಳಿತ ಚಿರತೆಯಾಗಲಿ; ಹುಲ್ಲಿನಲ್ಲಿ ಮಲಗಿ ಕಣ್ಣು ನಮ್ಮೆಡೆಗೆ ನೆಟ್ಟ ಹುಲಿಯಾಗಲಿ, ತಕ್ಷಣಕ್ಕೆ ಕಾಣುವುದೇ ಇಲ್ಲ. ತಿಪ್ಪರಲಾಗ ಹಾಕಿದರೂ ಯಾವ ಮಗನೂ ಸುಲಭಕ್ಕೆ ಕಂಡು ಹಿಡಿಯಲಾಗದಂತೆ ಪರಿಸರವೇ ಇವುಗಳಿಗೆ ಬಣ್ಣದ ಮೋಡಿ ಸಂಯೋಜನೆ ಮಾಡಿ ಬಿಟ್ಟಿದೆ.

ಕಾನನದಲ್ಲಿ ಕಣ್ಣುಗಳು ಚುರುಕಾಗಿರಬೇಕು ಎಂಬ ವಿಷಯದಲ್ಲಿ